

## ಮ್ಯಾಮ್ ಗುರ್ತು ಹಿಡೀತಾರಾ?

ನನ್ನ ಮೊಮ್ಮಗ ಸಮರ್ಥ ಮೂರುವರೆ ವರ್ಷದವ. ಮಾಂಟೆಸ್ಸರಿಯಿಂದ ಎಲ್‌ಕೆಜಿಗೆ ಬಡ್ತಿ ಹೊಂದಿದ. ಮಾಂಟೆಸ್ಸರಿಯಲ್ಲಿ ಯಾವ ಬಣ್ಣದ ಬಟ್ಟೆ ಹಾಕಿಕೊಂಡು ಸ್ಕೂಲಿಗೆ ಹೋದರೂ ಪರವಾಗಿರಲಿಲ್ಲ. ಇವನ ಇಬ್ಬರು ಅಕ್ಕಂದಿರು ಅದೇ ಸ್ಕೂಲಿನಲ್ಲಿ 3ನೇ ತರಗತಿಯಲ್ಲಿದ್ದರು. ದಿನಾ ಯೂನಿಫಾರಂ ಹಾಕಿಕೊಂಡು ಹೋಗುತ್ತಿದ್ದರು. ಸಮರ್ಥ ಎಲ್‌ಕೆಜಿಗೆ ಸೇರುವಾಗ ಅವರಮ್ಮ ಹೇಳಿದರು: 'ಸಮರ್ಥ ಇನ್ನು ಮೇಲೆ ನೀನು ಯೂನಿಫಾರಂ ಹಾಕಿಕೊಂಡು ಸ್ಕೂಲಿಗೆ ಹೋಗಬೇಕಪ್ಪ' ಎಂದರು. ಸಮರ್ಥ ಒಂದು ಗಳಿಗೆ ಯೋಚನೆ ಮಾಡಿ ಅವರಮ್ಮನಿಗೆ ಹೇಳಿದ 'ಅಮ್ಮ, ಯೂನಿಫಾರಂ ಹಾಕಿಕೊಂಡು ಹೋದರೆ ಮ್ಯಾಮ್' ನನ್ನ ಗುರ್ತು ಹಿಡೀತಾರಾ? ಇದನ್ನು ಕೇಳಿ ನಾವೆಲ್ಲ ನಕ್ಕೆವು.

**ಎ.ಎಸ್. ಚಂದ್ರಶೇಖರರಾವ್, ಬೆಂಗಳೂರು**

## 'ನಂಗೂ ಟ್ರಾಫಿಕ್ ಜಾಮ್ ಬೇಕು...'



ನಮ್ಮತ್ತಿಗೆಯ ಮೊಮ್ಮಗ 'ನಮನ' ತುಂಟ. ಒಮ್ಮೆ ನಾವೆಲ್ಲಾ ಬೆಂಗಳೂರಿಗೆ ಮದುವೆಗೆಂದು ಹೋಗುತ್ತಿದ್ದೆವು. ಬಸ್ಸಿನ ಕುಲುಕಾಟಕ್ಕೆ 'ನಮನ' ಅಮ್ಮನ ಮಡಿಲಲ್ಲಿ ನಿದ್ದೆ ಮಾಡುತ್ತಿದ್ದ. ನಾವು ಈ ಗಲಾಟೆ–ಗದ್ದಲವನ್ನು ನೋಡುತ್ತಾ, ವಾಹನ–ಜನದಟ್ಟಣೆ ಕುರಿತು ಮಾತಾಡುತ್ತಾ... ಎಷ್ಟು ಟ್ರಾಫಿಕ್ ಜ್ಯಾಂ ನೋಡಿ... ಅಂತೆಲ್ಲಾ ಏನೇನೋ ಮಾತಾಡುತ್ತಿದ್ದಾಗಲೇ, ಅರೆಬರೆ ನಿದ್ದೆಯಿಂದ ಎಚ್ಚರಗೊಂಡ ನಮನ 'ನಂಗೂ ಅದು ಬೇಕು...' ಎಂದು ಒಂದೇ ಸಮನೇ ಅಳುತ್ತಾ ಹಟ ಮಾಡತೊಡಗಿದ್ದ...

ಎಷ್ಟು ಸುಮ್ಮನಿರಿಸಿದರೂ ಅವನ ಹಟ ಕಡಿಮೆಯಾಗದಿದ್ದಾಗ... 'ಪುಟ್ಟಾ... ನಿನಗೇನು ಬೇಕಪ್ಪಾ?' ಎಂದವನ ಅಜ್ಜಿ ಅನುನಯಿಸಿ, ಮುದ್ದಿಸಿ, ಕೇಳಿದ್ದಳು. ಆಗ ಅವನು 'ನಂಗೂ 'ತಾಫಿಕ್ ಧಾಂ' ತಿನ್ನಲು ಬೇಕು... ಎನ್ನುವುದೇ? 'ಬ್ರೆಡ್–ಜ್ಯಾಂ' ಬಗ್ಗೆ ಮಾತ್ರ ಗೊತ್ತಿದ್ದ ಅವನು 'ಟ್ರಾಫಿಕ್ ಜ್ಯಾಂ' ಕೂಡ ವಿಶೇಷ ಬಗೆಯ ತಿನ್ನುವ ವಸ್ತುವಿರಬೇಕೆಂದು ತಿಳಿದುಕೊಂಡಿದ್ದ!

**ಮಾಲತಿ ರಾಮಕೃಷ್ಣ ಭಟ್, ಸಿದ್ದಾಪುರ**